ಫ್ಯಾಷನ್

# ಅಂಗಿ ಟೈಟು, ಲೂಸು ಯಾಕೆ, ಹೇಗೆ?



**ಸಿನಿಮಾದಲ್ಲಿ ನಾಯಕನ ಪಾತ್ರಕ್ಕೆ ತಕ್ಕಂತೆ ಬಟ್ಟೆ ಹಾಕಿಸುವುದು ಸಹಜ. ಅದನ್ನು ನೋಡಿ ಪಡ್ಡೆಗಳು ಅನುಕರಿಸುವುದರಿಂದ ಟ್ರೆಂಡ್ ಸೃಷ್ಟಿಯಾಗುತ್ತದೆ ಎನ್ನುವುದು ಮಾರುಕಟ್ಟೆಯ ಲೆಕ್ಕಾಚಾರ. ಕೆಲವೊಮ್ಮೆ ಇವನ್ನೂ ಮೀರಿ ಹೊಸತೊಂದು ಟ್ರೆಂಡ್ ಹುಟ್ಟಿದರೂ ಅಚ್ಚರಿಯಿಲ್ಲ.**

■ **ವಿಶಾಖ ಎನ್.**

'ಜೋಗಿ' ಸಿನಿಮಾ ತೆರೆ ಕಂಡಾಗ ಶಿವರಾಜ್‌ಕುಮಾರ್ ತೊಟ್ಟಿದ್ದ ಅಂಗಿಯ ಮೇಲೆ ಅಂಗೈನ ಗುರುತಿತ್ತು. ಚಲನಚಿತ್ರದ ಅಭಿಮಾನಿಗಳಿಗೆ ಕೆಲವೇ ದಿನಗಳಲ್ಲಿ ಬೆಂಗಳೂರಿನ ಕಲಾಸಿಪಾಳ್ಯದ ಗೂಡಂಗಡಿಯಲ್ಲಿ ನೇತಾಡುತ್ತಿದ್ದ ಅಂಥದ್ದೇ ಅಂಗಿ ಕಣ್ಣಿಗೆ ಬಿದ್ದಿರಲಿಕ್ಕೆ ಸಾಕು.

'ಗಜಿನಿ' ಹಿಂದಿ ಸಿನಿಮಾದಲ್ಲಿ ಅಮೀರ್ ಖಾನ್ ಅರೆತೋಳಿನ ಬಿಗಿಯಂಗಿ ತೊಟ್ಟಿದ್ದರಲ್ಲ; ಅದು ಅವರ ಭುಜಬಲವನ್ನು ತೋರುವಷ್ಟು 'ಫಿಟ್' ಆಗಿತ್ತು. ಆ ವಿನ್ಯಾಸದ ಅಂಗಿಗಳನ್ನು ದೊಡ್ಡ ದೊಡ್ಡ ಮಳಿಗೆಗಳಲ್ಲೂ ಮಾರಾಟಕ್ಕೆ ಬಿಟ್ಟಿದ್ದು 'ಅಲೆನ್ ಸಾಲಿ' ಕಂಪೆನಿ.

ಡ್ವೇನ್ ಸ್ಮಿತ್ ಯಾನೆ ರಾಕ್ ಹಾಲಿವುಡ್ ಸಿನಿಮಾಗಳಲ್ಲಿ ತೊಟ್ಟ ಬೂದು ಬಣ್ಣದ ಬಿಗಿ ಟಿ–ಶರ್ಟ್‌ಗಳು ಕನಿಷ್ಠ ಐವತ್ತು ದೇಶಗಳ ಮಾರುಕಟ್ಟೆಗೆ ಇಳಿಯುತ್ತವೆ.

ಈ ಮೂರೂ ಉದಾಹರಣೆಗಳಿಂದ ಸ್ಪಷ್ಟವಾಗುವ ವಿಷಯ ಒಂದೇ–ದೃಶ್ಯ ಮಾಧ್ಯಮಗಳಿಗೂ ಪುರುಷರ ಉಡುಗೆಗೂ ದೊಡ್ಡ ಮಟ್ಟದ ಸಂಬಂಧ ಸಲ್ಲುತ್ತಿದೆ. 'ಸಿಂಗಂ 3' ಸಿನಿಮಾದಲ್ಲಿ ತಮಿಳು ನಟ ಸೂರ್ಯ ಒಂದೇ ಸೀನ್‌ನಲ್ಲಿ ಎರಡೆರಡು 'ಸ್ಲಿಮ್ ಫಿಟ್' ಅಂಗಿ ತೊಟ್ಟು ದುರುಗುಟ್ಟಿ ನೋಡಿದ್ದನ್ನು ಕಂಡ ಪ್ರೇಕ್ಷಕರಿಗೂ ಅವರ ಅಂಗಿಗಳು ತುಂಬಾ ಇಷ್ಟವಾಗಿದ್ದವು. ಅಂಥವನ್ನು ಇಷ್ಟಪಡುವ ಪಡ್ಡೆಗಳಿಗೆ 'ಲವ್ ಯೂ ಜಿಂದಗಿ' ಸಿನಿಮಾದಲ್ಲಿ ಶಾರುಖ್ ಖಾನ್ ತೊಟ್ಟಿದ್ದ ಲೈನೆನ್ ಶ್ರೇಣಿಯ ಸಭ್ಯವಸ್ತ್ರಗಳ ಶ್ರೇಣಿ ಅಷ್ಟೇನೂ ಇಷ್ಟವಾಗಲಾರವು.

ಹಾಗಿದ್ದರೆ ಈಗ ಪುರುಷರ ವಸ್ತ್ರದ ಟ್ರೆಂಡ್ ಯಾವುದು? 'ಸ್ಕಿನ್ ಟೈಟ್', 'ಸ್ಲಿಮ್ ಫಿಟ್' ಎಂದು ಉತ್ತರ ಹೇಳುವವರೇ ಹೆಚ್ಚಾಗಿ ಸಿಕ್ಕಾರು. ಹಾಗಿದ್ದರೆ, ಅವುಗಳಲ್ಲೂ ಎಂಥ ಬಣ್ಣಗಳಿಗೀಗ ಬೇಡಿಕೆ ಎಂಬ ಇನ್ನೊಂದು ಪ್ರಶ್ನೆ ಎದುರಾಗುತ್ತದೆ. ಈ ವಿಷಯದಲ್ಲಿ ಮಾತ್ರ ವಿಪರೀತ ಪ್ರಯೋಗಗಳು ನಡೆಯುತ್ತಿವೆ.

'ಗುಲೇಬಾ..' ತಮಿಳು ಹಾಡಿನಲ್ಲಿ ಪ್ರಭುದೇವ ನೃತ್ಯವಾಡಲು ಬಳಸುವ ಉಡುಗೆಗಳನ್ನೇ ಗಮನಿಸಿ. ಕಂದು, ಹಳದಿ, ಕಡುಗೆಂಪು, ಕಿತ್ತಳೆ ಎಲ್ಲ 'ಗಾಢ' ವರ್ಣಗಳ ವಸ್ತ್ರಗಳೂ ಕಣ್ಣಿಗೆ ರಾಚುತ್ತವೆ. ಕೆಲವಂತೂ 'ಫ್ಲೋರಸೆಂಟ್' ಬಣ್ಣಗಳು.

ಬ್ರಾಂಡ್ ಸ್ಪೀಲ್ ಕಂಪನಿಯ ಸಂಸ್ಥಾಪಕ ಸೂರ್ಯ ಸೂರಿ ಈ ವರ್ಷ ಭಾರತದ ಮಾರುಕಟ್ಟೆಯಲ್ಲಿ ರಾರಾಜಿಸುವ ಉಡುಗೆಗಳ ಎಂಟು ಬಗೆಯ ಪಟ್ಟಿಯನ್ನು ಮುಂದಿಟ್ಟಿದ್ದಾರೆ. ಕೃಶದೇಹಿಗಳು ದೊಗಲೆ ವಾಷ್ಡ್ ಡೆನಿಮ್‌ಗಳಿಗೆ ಮೊರೆಹೋಗಲಿದ್ದಾರೆ. ಇದು 1980ರಲ್ಲಿದ್ದ ವಸ್ತ್ರ ಶೈಲಿ. ಕ್ರೀಡಾ ಉಡುಗೆಗಳಲ್ಲೂ ಸಡಿಲವಾಗಿರುವುದನ್ನು ಯುವಜನತೆ ಇಷ್ಟಪಡಲಿದ್ದಾರೆ ಎನ್ನುವುದು ಅವರ ಲೆಕ್ಕಾಚಾರ.

ಒದನೆ ಬಣ್ಣ, ಕಡುಗೆಂಪು ಹಾಗೂ ಹಸಿರು ಬಣ್ಣದ ವಿವಿಧ ಶೇಡ್‌ಗಳ ಕಡೆಗೆ ಯುವಕರ ಚಿತ್ತ ಹರಿಯುತ್ತಿದೆ ಎಂದು ಅವರು ಗುರುತಿಸಿದ್ದಾರೆ. 'ಸೆಮಿ ಫಾರ್ಮಲ್' ಬಟ್ಟೆಗಳಿಗೇ ಹೆಚ್ಚು ಬೇಡಿಕೆ ಕುದುರಿದ ವರ್ಷ ಇದೆನ್ನುವುದು ಅವರ ಅನುಭವದ ಮಾತು.

ಖಾಸಗಿ ಹಾಗೂ ಕಚೇರಿ ಸಮಾರಂಭಗಳಿಗೆ ವೇಯ್ಸ್ಟ್ ಕೋಟ್‌ಗಳನ್ನು ಧರಿಸುವ ಯುವಕರ ಸಂಖ್ಯೆಯೂ ಹೆಚ್ಚಾಗುತ್ತಿದೆ ಎಂದೂ ಅವರು ಹೇಳಿದ್ದಾರೆ. ಬ್ಲೇಜರ್ಸ್, ಟಿ–ಶರ್ಟ್‌ಗಳನ್ನು ಹಿಂದಿಕ್ಕಿ ಇವುಗಳಿಗೆ ಬೇಡಿಕೆ ಬಂದಿದ್ದು, ಅಂಗಿಗಳಿಗೂ ಪೂರಕ ಮಾರುಕಟ್ಟೆಯನ್ನು ಈ ಅಭಿರುಚಿ ಬೆಳೆಸಿದೆಯಂತೆ.

ಕಳೆದ ವರ್ಷ ಒಂದೇ ಬಣ್ಣವಿರುವ ಅಂಗಿಗಳನ್ನು ಧರಿಸುವ ಟ್ರೆಂಡ್ ಇತ್ತು. ಈ ವರ್ಷ ಕೂಡ ಅದು ಮುಂದುವರಿದಿದೆ. ಒಂದು ಅಂಗಿಯಲ್ಲಿ ಅಥವಾ ಪ್ಯಾಂಟಿನಲ್ಲಿ ಎರಡು ಅಥವಾ ಮೂರು ಬಣ್ಣಗಳಿರುವುದನ್ನು ಯುವಜನತೆ ಇಷ್ಟಪಡುತ್ತಿಲ್ಲ.

ಇಷ್ಟಾಗಿಯೂ 'ಫನ್ನಿ' ಆಗಿ ಕಾಣುವ ಗಾಢ ಬಣ್ಣಗಳ ವಸ್ತ್ರಗಳನ್ನು ಹಾಕಿಕೊಂಡು ಹೇಗೆ ಕಾಣುತ್ತೇವೆ ಎಂದು ನೋಡುವ ಪ್ರವೃತ್ತಿಯ ಗಂಡು ಮಕ್ಕಳೂ ಈಗ ಹೆಚ್ಚಾಗಿದ್ದಾರೆ.